**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 17.06.2025**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಸಿ ಕೆ ವಕೀಲರಿಂದ**

ನನಗೆ ಕನ್ನಡ ಮಾತ್ರ ಓದಲು ಬರೆಯಲು ಬರುತ್ತದೆ . ಇಂಗ್ಲೀಷ್ ಅಷ್ಟಾಗಿ ಬರುವುದಿಲ್ಲ. ಈ ಪ್ರಕರಣವನ್ನು ಹೂಡಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನನ್ನ ಯಜಮಾನರ ಹೆಸರು ಎ ಯು ಚಿಟ್ಟಿಯಪ್ಪ . ಅವರು ಬದುಕಿದ್ದಾರೆ . ನಾನು ಟೈಲರಿಂಗ್ ಮಾಡಿಕೊಂಡಿರುತ್ತೇನೆ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಟೈಲರಿಂಗ್ ಮಾಡಿಕೊಂಡಿರುತ್ತೇನೆ ಎಂದು ತೋರಿಸಿರುವುದಿಲ್ಲ. ನಾನು ನನ್ನ ಪಿರ್ಯಾದಿನಲ್ಲಿ ಟೈಲರಿಂಗ್ ಮಾಡಿಕೊಂಡಿರುತ್ತೇನೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿ . ಆದ್ದರಿಂದ ನಾನು ಟೈಲರಿಂಗ್ ಕೆಲಸ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಉದ್ಯೋಗ ಕಾತ್ರಿಯಲ್ಲಿ ನಾನು ಟೈಲರಿಂಗ್ ಮಾಡುವುದಕ್ಕೆ ಅನುಮತಿ ಪತ್ರವನ್ನು ಪಡೆದಿರುತ್ತೇನೆ . ಅನುಮತಿ ಪತ್ರವನ್ನು ನಾನು ಸರಕಾರ ಯೋಜನೆಯ ಅಡಿ ಪಡೆದಿರುತ್ತೇನೆ . ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೆ ತೊಂದರೆ ಇರುವುದಿಲ್ಲ. ನಾನು ನನ್ನ ಸ್ವಂತಕೋಸ್ಕರ ಮನೆಯಲ್ಲಿ ಟೈಲರಿಂಗ್ ಮಾಡಿಕೊಂಡಿರುತ್ತೇನೆ ಎಂದರೆ ಸರಿ.

ನಿಪಿ **1** ರಿಂದ **5** ಮತ್ತು **5**ಎ ನ್ನು ಹೊರತುಪಡಿಸಿ ಬೇರೆ ಯಾವುದೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ ಎಂದರೆ ಸರಿ . ಆರೋಪಿಯು **2022** ನೇ ಸಾಲು ಮಾರ್ಚ್ ನನ್ನ ಬಳಿ ರೂ **2,00,000/-** ನ್ನು ಪಡೆದಿರುತ್ತಾರೆ . ನಾನು ನನ್ನ ಸ್ವಂತ ಮನೆಯಲ್ಲಿ ವಾಸವಿರುತ್ತೇನೆ. ನಾನು ನನ್ನ ನಮ್ಮ ಮನೆಯವರು ವಾಸವಿರುತ್ತೇವೆ . ನಾನು ಅಕ್ಷತಾ ಎ ಆರ್ ರವರಿಗೆ ಸಾಲ ನೀಡಿರುವ ಬಗ್ಗೆ ಯಾವುದೇ ಲಿಖಿತ ದಾಖಲೆ ಇದೆಯಾ

ಎಂದರೆ ಸಾಕ್ಷಿ ಚೆಕ್ ಮಾತ್ರ ಇರುತ್ತದೆ ಎಂದು ನುಡಿದಿರುತ್ತಾರೆ . ನಿಪಿ **1** ನ್ನು ಹೊರುತುಪಡಿಸಿ ಬೇರೆ ಯಾವುದೆ ದಾಖಲೆ ಇರುವುದಿಲ್ಲ. ನಾನು ಆರೋಪಿ ಕಡೆಯಿಂದ ದಿಃ **10.03.2022** ರಂದು ಸಾಲ ಕೊಟ್ಟೆ ಎಂದು ಯಾವುದೆ ದಾಖಲೆಗಳನ್ನು ಬರೆಸಿಕೊಂಡಿರುವುದಿಲ್ಲ. ಕಾನೂನು ಅವಶ್ಯಕತೆ ಇದೆ ಎಂದು ಬರೆಸಿರುದ್ದೀರಲ್ಲಾ ಅದು ಯಾವ ರೀತಿ ಅವಶ್ಯಕತೆ ಎಂದರೆ ಸಾಕ್ಷಿಯು ಆರೋಪಿಯು ಅವರ ಆರೋಗ್ಯ ಸರಿಯಿಲ್ಲದ ಕಾರಣ ಆಪರೇಷನ್ ಗಾಗಿ ಹಣ ಬೇಕೆಂದು ನನ್ನ ಬಳಿ ಕೇಳಿರುತ್ತಾರೇ ಎಂದು ನುಡಿದರು . ಆರೋಪಿ ಎಲ್ಲಿ ಶಸ್ತ್ರ ಚಿಕಿತ್ತೆ ಪಡೆದಿದ್ದಾರೆ ಎಂದು ನಾನು ನೋಡಿರುವುದಿಲ್ಲ. ಆರೋಪಿ ಶಸ್ತ್ರ ಚಿಕಿತ್ಸೆಗೆ ಒಳಗಾಗಿರುವುದಿಲ್ಲ ನನ್ನ ಬಳಿ ಹಣ ಪಡೆದಿರುವುದಿಲ್ಲ ಎಂದರೆ ಸಾಕ್ಷಿಯು ಹಣ ಪಡೆದುಕೊಂಡಿರುತ್ತಾರೆ ಎಂದು ನುಡಿದರು . ಆರೋಪಿಯ ಮೈಸೂರು ಯುೂನಿವರ್ಸಿಟಿಯಲ್ಲಿ ಕೆಲಸ ಮಾಡುತ್ತಾರೆ . ಆರೋಪಿಯು ಮೈಸೂರಿನಲ್ಲಿ ಎಲ್ಲಿ ಉಳಿದುಕೊಳ್ಳುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಮೈಸೂರು ಯುೂನಿವರ್ಸಿಟಿ ವರ್ಕಿಂಗ್ ವುಮೆನ್ಸ ಹಾಸ್ಟೆಲ್ ಪಿ ಜಿ ಯಲ್ಲಿ ಉಳಿದುಕೊಳ್ಳುತ್ತಾರೆ ಎಂದರೆ ಸರಿಯಲ್ಲ.

ಮೈಸೂರು ಯುೂನಿವರ್ಸಿಟಿಯಲ್ಲಿ ಕೆಲಸ ಮಾಡುವುದರಿಂದ ಅಲ್ಲಿ ಉಳಿದುಕೊಳ್ಳಬೇಕೆಂದು ಅವರಿಗೆ ಹಾಸ್ಟೆಲ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಚೆಕ್ ನ್ನು ಯಾವಾಗ ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಆರೋಪಿಗೆ ಹಣ ಕೊಟ್ಟ ದಿನವೇ ಕೊಟ್ಟರು ಎಂದು ನುಡಿದಿರುತ್ತಾರೆ . ಚೆಕ್ ನ್ನು ನಾನೇ ಬರೆದು ಬ್ಯಾಂಕ್ ಗೆ ಹಾಕಿರುತ್ತೇನೆ . ಆರೋಪಿ ನಮ್ಮ ಮನೆಗೆ ಬಂದು ಹಣವನ್ನು ಪಡೆದುಕೊಂಡಿರುತ್ತಾರೆ . ದಿಃ **10.03.2022** ನೇ ತಾರೀಖನಂದು ನಾನು ಆರೋಪಿಗೆ ಹಣವನ್ನು ಕೊಟ್ಟಿರುತ್ತೇನೆ.

ಆರೋಪಿ ಬ್ಲಾಕ್ ಚೆಕ್ ನೀಡಿರುತ್ತಾರೆ . ಚೆಕ್ ನಂಬರ ನನಗೆ ಗೊತ್ತಿಲ್ಲ. ನಾನು ಚೆಕ್ ನ್ನು ಬ್ಯಾಂಕ್ ಗೆ ಹಾಕಬೇಕಾದರೆ ಚೆಕ್ ನ್ನು ಯಾವ ದಿನಾಂಕ ನಮೂದು ಮಾಡಿ ಹಾಕಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಆರೋಪಿ ನಿಪಿ **1** ರಲ್ಲಿ ದಿನಾಂಕವನ್ನು ನಮೂದು ಮಾಡಿರುವುದಿಲ್ಲ. ಆರೋಪಿ **3** ತಿಂಗಳ ಒಳಗೆ ಮರು ಪಾವತಿ ಮಾಡುತ್ತೇನೆ ಎಂದು ಬರವಣಿಗೆಯಲ್ಲಿ ಯಾವುದೆ ದಾಖಲಾತಿಗಳನ್ನು ನೀಡಿರುವುದಿಲ್ಲ. ಆರೋಪಿಯು ಪೊಸ್ಟೆಡ್ ಚೆಕ್ ನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಪೊಸ್ಡಡ್ ಚೆಕ್ ಏನೆಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ಸದರಿ ದಿನಾಂಕವನ್ನು **10** ತಿಂಗಳ ಲೆಕ್ಕ ಹಾಕಿ ಅಲ್ಲಿಂದ ಚೆಕನ್ನು ನಾನೆ ಬರೆದು ಬ್ಯಾಂಕ್ ಗೆ ಹಾಕಿರುತ್ತೇನೆ ಎಂದರೆ ಸಾಕ್ಷಿಯು **10** ತಿಂಗಳನ್ನು ನಾನು ಲೆಕ್ಕ ಹಾಕಿರುವುದಿಲ್ಲ ಚೆಕ್ ನ್ನು ಬ್ಯಾಂಕ್ ಗೆ ಹಾಕಿರುತ್ತೇನೆ ಎಂದು ನುಡಿದರು. ನಾನು ಲೇವಾದೇವಿಯನ್ನು ಮಾಡುವುದಿಲ್ಲ. ನಾನು ಆರೋಪಿ ಮೇಲೆ ಹೊರತುಪಡಿಸಿ ಇನ್ನು ಒಂದು ಚೆಕ್ ಕೇಸುನ್ನು ಹಾಕಿರುತ್ತೇನೆ .

ನಾನು ಲತಾ ಎಂಬುವವರ ಮೇಲೆ ಚೆಕ್ ಕೇಸನ್ನು ಹಾಕಿರುತ್ತೇನೆ. ನಾನು ಲತಾ ಎಂಬುವವರ ಮೇಲೆ ರೂ **8,00,000/-** ಕ್ಕೆ ಚೆಕ್ ಕೇಸನ್ನು ಹಾಕಿರುತ್ತೇನೆ. ಇನ್ನು ಕೇಸು ಲತಾ ಎಂಬುವವರ ಮೇಲೆ ನಡೆಯುತ್ತಿರುವುದಿಲ್ಲ. ಆರೋಪಿ ಲತಾ ರವರ ಪರವಾಗಿ ಕೇಸ್ ನಡೆಸುತ್ತಿರುವ ಹೆಸರು ಸವಿತಾ . ಸಿಸಿ ನಂ **1454/2024** ರಂತೆ , ಸಿಸಿ ನಂ **1455/2024** ರಂತೆ ಎರಡು ಕೇಸುಗಳನ್ನು ಲತಾ ರವರ ಮೇಲೆ ಹಾಕಿರುತ್ತೇನೆ ಎಂದರೆ ಸರಿ . ಸದರಿ ಕೇಸುಗಳು ಮುಂದಿನ ತಿಂಗಳು **25.07.2025** ರಂದು ಇದೆ ಎಂದರೆ ಸರಿ . ಸದರಿ ಪ್ರಕರಣಗಳಲ್ಲೂ ಕೂಡ ಪಾಟೀ ಸವಾಲು ಇರುತ್ತದೆ ಎಂದರೆ ಸರಿ .

ಸದರಿ ಕೇಸಿನ ದಾಖಲೆಗಳನ್ನು ಈ ಕೇಸಿನಲ್ಲಿ ಹಾಜರುಪಡಿಸಲು ಯಾವುದೆ ತೊಂದರೆ ಇದೆ ಎಂದರೆ ಸಾಕ್ಷಿಯು ಅರ್ಥವಾಗುತ್ತಿಲ್ಲ ಎಂದು ನುಡಿದಿರುತ್ತಾರೆ. ಲತಾ ರವರ ವಿರುದ್ದ ಹಾಕಿರುವ ಎರಡು ಕೇಸುಗಳು ತಲಾ **4** ಲಕ್ಷ ಕ್ಕೆ ಒಟ್ಟು **8** ಲಕ್ಷಕ್ಕೆ ಹಾಕಿರುತ್ತೇನೆ . ಲತಾರವರಿಗೆ ಮೂರು ವರ್ಷದ ಹಿಂದೆ ಹಣವನ್ನು ನೀಡಿರುತ್ತೇನೆ.

ಬ್ಯಾಂಕ್ ರವರು ಸಿಗ್ನೇಚರ್ ಡಿಫರ್ ಎಂದು ಮತ್ತು ಹಣ ಇರುವುದಿಲ್ಲ ಎಂದು ಹಿಂಬರ ನೀಡಿರುತ್ತಾರೆ . ಹಿಂಬರವನ್ನು ಯಾವ ದಿನಾಂಕದಂದು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ **2** ರಲ್ಲಿ ಇರುವ ಸ್ಟೇಟಮೆಂಟ್ ಆಫ್ ಕುಶಾಲನಗರ ನೀಡಿರುವ ಹಿಂಬರ ದಿಃ **11.01.2023** ಎಂದರೆ ಸರಿ . ನಾನು ಆರೋಪಿ ವಿರುದ್ದ ಹಾಕಿರುವ ಚೆಕ್ ನ ದಿಃ **11.01.2023** ಎಂದರೆ ಸರಿ . ನಾನು ಕಳುಹಿಸಿರುವ ಕಾನೂನು ತಿಳುವಳಿಕೆ ಪತ್ರದಲ್ಲಿ ನಿಪಿ **1** ಯಾವ ದಿನಾಂಕದಂದು ಬ್ಯಾಂಕಗೆ ಹಾಜರುಪಡಿಸಿರುತ್ತೇನೆ ಮತ್ತು ಯಾವ ದಿನಾಂಕಂದು ಬ್ಯಾಂಕ್ ರವರು ಹಿಂಬರವನ್ನು ನೀಡಿರುತ್ತಾರೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ **3** ನ್ನು ತೋರಿಸಲಾಗಿ ಅದರಲ್ಲಿ ಬ್ಯಾಂಕ ಗೆ ಹಾಕಿದ ದಿನ ಮತ್ತು ಹಿಂಬರ ನೀಡಿದ ದಿನ ನಮೂದು ಆಗಿರುವುದಿಲ್ಲ ಎಂದರೆ ಸಾಕ್ಷಿಯು ನಿಪಿ **3** ನ್ನು ನೋಡಿ ಸರಿ ಎಂದು ನುಡಿದಿರುತ್ತಾರೆ .

ನಾನು ನೀಡಿರುವ ಪಿರ್ಯಾದಿನಲ್ಲಿ ಸದರಿ ದಿನಾಂಕಗಳನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ದೂರಿನಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಬ್ಯಾಂಕ್ ಗೆ ಹಾಕಿದ ದಿನ ಮತ್ತು ಹಿಂಬರಹ ನೀಡಿದ ದಿನಾಂಕವನ್ನು ನಮೂದು ಮಾಕಿರುದಿಲ್ಲ ಎಂದರೆ ಸಾಕ್ಷಿಯು ದೂರು

ಮತ್ತು ಪ್ರಮಾಣ ಪತ್ರವನ್ನು ಪರಿಶೀಲಿಸಿ ಸರಿ ಎಂದು ನುಡಿದಿರುತ್ತಾರೆ. ನಾನು ನಿಪಿ **3** ನ್ನು ಆರೋಪಿಗೆ ಯಾವ ದಿನಾಂಕದಂದು ಕಳುಹಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ನಿಪಿ **5**ಎ ರಲ್ಲಿ ದಿಃ **03.02.2023** ಎಂದು ನಮೂದು ಆಗಿರುತ್ತದೆ ಎಂದರೆ ಸರಿ . ನಿಪಿ **1** ರಲ್ಲಿಇರುವ ಬರವಣಿಗೆ ನಾನೆ ಹೇಳಿ ಬರೆಸಿರುತ್ತೇನೆ. ನಿಪಿ **1** ರಲ್ಲಿರುವ ಸಹಿಯನ್ನು ನಾನೆ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ **1** ರಲ್ಲಿ ಹಾಕಿರುವ ಸಹಿಯನ್ನು ನಾನು ಹೇಳಿ ಬರೆಸಿದವರೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಿಪಿ **1** ರಲ್ಲಿ ಆರೋಪಿ ಸಹಿ ಎಂದು ಹೇಳುವ ಸಹಿ ಅಕ್ಷತಾ ಎಂ ಆರ್ ಎಂದು ಇರುತ್ತದೆ ಆದರೆ ಅಕ್ಷತಾ ರವರ ಇನಶಿಯಲ್ ಅಕ್ಷತಾ ಎ ಆರ್ ಆಗಿರುತ್ತದೆ ಎಂದರೆ ಸಾಕ್ಷಿಯು ನಿಪಿ **1** ರಲ್ಲಿ ನಾನು ಸಹಿ ಹಾಕಿರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಆರೋಪಿಯ ಆದಾರ ಕಾರ್ಡನ್ನು ತೋರಿಸಲಾಗಿ ಅದರಲ್ಲಿ ಅಕ್ಷತಾ ಎ ಆರ್ ಎಂದು ಇರುತ್ತದೆ ಎಂದರೆ ಸಾಕ್ಷಿಯು ಸರಿ ಎಂದು ನುಡಿದಿರುತ್ತಾರೆ . **ಸಾಕ್ಷಿಯು ಆದಾರ ಕಾರ್ಡನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು.** ಆರೋಪಿಯ ಪೂರ್ವ ಪರ ನನಗೆ ತಿಳಿದಿರುತ್ತದೆ ಎಂದರೆ ನನಗೆ ಅಷ್ಟಾಗಿ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಪಿರ್ಯಾದಿಯ ಪ್ಯಾರಾ ನಂಬರ **1** ರಲ್ಲಿ ನಾನು ಆರೋಪಿಯ ಪೂರ್ವ ಪರ ಬರೆದಿರುವುದಿಲ್ಲ.

ನಿಪಿ **2** ರಲ್ಲಿ ನೀಡಿರುವ ಹಿಂಬರದಂತೆ ಪಿರ್ಯಾದಿಯ ಪ್ಯಾರಾ ನಂಬರ **3** ರಲ್ಲಿ **4** ನೇ ಲೈನಿನಲ್ಲಿ ಹೇಳಿರುತ್ತೇನೆ ಎಂದರೆ ಸರಿ . ಸಾಕ್ಷಿಗೆ ಕಲಂ **313** ರಲ್ಲಿ ಆರೋಪಿಯ ಸಹಿಯನ್ನು ಮತ್ತು ನಿಪಿ **1** ರಲ್ಲಿ ರುವ ಸಹಿಯನ್ನು ತೋರಿಸಲಾಗಿ ಅದು ಬೇರೆ ಬೇರೆ ಇರುತ್ತದೆ ಎಂದರೆ ಸಾಕ್ಷಿಯು

ಸರಿಯೆಂದು ನುಡಿದಿರುತ್ತಾರೆ . ನಿಪಿ **1** ರಲ್ಲಿ ಆರೋಪಿಯ ಸಹಿಯನ್ನು ನಾನೆ ಹೇಳಿ ಬರೆಸಿರುತ್ತೇನೆ ಎಂದರೆ ಸುಳ್ಳು .

ಮುಂದುವರಿದ ಪಾಟಿ ಸವಾಲಿಗೆ ಆರೋಪಿಯ ಪರ ವಕೀಲರು ಸಮಯವಕಾಶ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ